---

ದಿನಾಂಕಃ 14.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

---

ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಪಿ ಎಸ್ ವಕೀಲರಿಂದ

8. ರೌಂಡ್ಸ್ ಕರ್ತವ್ಯಕ್ಕೆ ಬೆಳಿಗ್ಗೆ 10.00 ಗಂಟೆಗೆ ಠಾಣೆಯಿಂದ ಹೊರಟೆವು. ವಿಟ್ಲದಿಂದ 18 ಕಿ.ಮೀಟರ್ ದೂರದಲ್ಲಿ ಮಾಣಿಲ ಗ್ರಾಮ ಇದೆ. ಹೋಗುವಾಗ ಮಾರ್ಗ ಮಧ್ಯದಲ್ಲಿ ವಾಹನಗಳನ್ನು ತಪಸಾಣೆ ನಡೆಸಿರುತ್ತೇನೆ. ಎಲ್ಲಿ ಎಲ್ಲಿ ನಡೆಸಿರುತ್ತೇನೆ ಎಂದು ಈಗ ನೆನಪಿಲ್ಲ. ಬಾತ್ಮಿದಾರರು ಅಟೋ ರಿಕ್ಷಾದ ನೊಂದಣಿ ಸಂಖ್ಯೆಯನ್ನು ಮತ್ತು ಸಾಗಾಟ ಮಾಡುತ್ತಿರುವ ವ್ಯಕ್ತಿಯ ಹೆಸರನ್ನು ತಿಳಿಸಿರಲಿಲ್ಲ. ಬಾತ್ಮಿ ವಿಚಾರವನ್ನು ಕೂಡಲೇ ಪೋನ್ ಕರೆ ಮಾಡಿ ಮೇಲಾಧಿಕಾರಿಗಳಿಗೆ ನಾನು ತಿಳಿಸಿರುವುದಿಲ್ಲ. ಮಾಣಿಲ ಗ್ರಾಮ ಮತ್ತು ಪೆರುವಾಯಿ ಗ್ರಾಮ ಬೇರೆ ಬೇರೆ ಗ್ರಾಮ ಎಂದರೆ ಸರಿ . ಎರಡು ಗ್ರಾಮಗಳಲ್ಲಿ ಪೆರುವಾಯಿ ಸೊಸೈಟಿ ಇದೆ ಎಂದರೆ ಸರಿ . ಮಾಣಿಲ ಗ್ರಾಮದ ಮೂರ್ವ ಎಂಬಲ್ಲಿ ಪಂಚರು ಸಿಕ್ಕಿರುತ್ತಾರೆ. ಮೂರ್ವ ಎಂಬಲ್ಲಿಂದ ಪೆರುವಾಯಿ ಸೊಸೈಟಿಗೆ ಸುಮಾರು 3 ಕಿ.ಮೀಟರ್ ದೂರ ಇದೆ . ಪೆರುವಾಯಿ ಗ್ರಾಮದ ಪೆರುವಾಯಿ ಸೊಸೈಟಿ ಬಳಿ ಕಾಯುತ್ತಿರುವಾಗ ಬೇರೆ ಯಾವುದೇ ವಾಹನಗಳು ಬಂದಿರುವುದಿಲ್ಲ. ಮಾಣಿಲ ಗ್ರಾಮದ ಮೂರ್ವ ಎಂಬಲ್ಲಿ ಶೋಧನ ವಾರಂಟನ್ನು ತಯಾರಿಸಿಕೊಂಡಿರುತ್ತೇನೆ.

9. ಅಟೋ ರಿಕ್ಷಾವನ್ನು ನಾನು ನಿಲ್ಲಿಸುವಂತೆ ಸೂಚಿಸಿರುತ್ತೇನೆ. ಚಾಲಕ ಅಟೋದಿಂದ ಇಳಿದು 20 ಮೀಟರ್ ದೂರ ಓಡಿ ಪ್ರಯತ್ನಿಸಿರುತ್ತಾನೆ ಆತನನ್ನು ನಾನು ಹಿಡಿದಿರುತ್ತೇನೆ. ರಿಕ್ಷಾದ ಹಿಂಬಧಿಯ ಸೀಟಿನ ಮೇಲೆ ಮಧ್ಯಗಳು ಇದ್ದವು. ಮುದ್ದೆಮಾಲುಗಳು ಬಟ್ಟೆಯ ಚೀಲದಲ್ಲಿ ತುಂಬಿದ್ದವು. ನಾನು ಮತ್ತು ಸಿಬ್ಬಂದಿಗಳು ಮಧ್ಯಗಳನ್ನು ತನಿಖೆ ಮಾಡಿರುತ್ತೇವೆ. ಅಟೋ ರಿಕ್ಷಾದ ಚಾಚಿಸ್ ಮತ್ತು ಇಂಜಿನ್

ನಂಬ್ರನ್ನು ಮಹಜರಿನಲ್ಲಿ ನಮೂದಿಸಿರುವುದಿಲ್ಲ. ಪೆರುವಾಯಿ ಸೊಸೈಟಿಯವರನ್ನು ನಾನು ವಿಚಾರಿಸಿರುವುದಿಲ್ಲ. ನಿಪಿ-2 ಮಹಜರನ್ನು ಇಲಾಖಾ ಸಿಬ್ಬಂದಿ ನನ್ನ ನಿರ್ದೇಶನದಂತೆ ಇಲಾಖಾ ಲ್ಯಾಪ್ ಟಾಪ್ ನಿಂದ ಬೆರಳಚ್ಚು ಮಾಡಿ ಇಲಾಖಾ ಪ್ರಿಂಟರ್ ನಿಂದ ಪ್ರಿಂಟ್ ತೆಗೆಯಲಾಯಿತು. ಈ ವಿಚಾರವನ್ನು ಮಹಜರಿನಲ್ಲಿ ಬರೆದಿರುವುದಿಲ್ಲ. ಮುಮಾ-3 ನ್ನು ಸಾಕ್ಷಿಗೆ ತೋರಿಸಿ ಅದು ಬಟ್ಟೆ ಚೀಲ ಆಗಿರುವುದಿಲ್ಲ ಎಂದರೆ ಸರಿ . ನೂತನ್ ಬಾರ್ ಮತ್ತು ತಕ್ಷೀರು ಸ್ಥಳದ ನಡುವೆ ಸುಮಾರು 3 ಕಿ.ಮೀಟರ್ ಅಂತರ ಇದೆ. ಪೆರುವಾಯಿ ವಿಟ್ಲ ಕಡೆಗೆ ನೂತನ್ ಬಾರ್ ಇದೆ. ಆರೋಪಿಗೂ, ತಕ್ಷೀರಿಗೂ ಮತ್ತು ಮುದ್ದೆಮಾಲಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಸಿಬ್ಬಂದಿಗಳೊಂದಿಗೆ ತೆರಳಿ ಯಾವುದೇ ತಕ್ಷೀರು ಪತ್ತೆ ಹಚ್ಚಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಾಗಲೀ ಮತ್ತು ಪಂಚರಿಗಾಗಲೀ ಯಾವುದೇ ನೋಟಿಸನ್ನು ನೀಡಿರುವುದಿಲ್ಲ, ಶೋಧನಾ ವಾರಂಟನ್ನು ಮತ್ತು ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ಸ್ವಾಧೀಪಡಿಸಿಕೊಂಡು ಮಹಜರು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ದಾಖಲೆಯನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ